ಅ)

	ರೂ.ಲಕ್ಷಗಳಲ್ಲಿ			
ವರ್ಷ	ಆಯವ್ಯಯ ದಲ್ಲಿ ನಿಗದಿ ಪಡಿಸಿದ ಹಣ	ಬಿಡುಗಡೆ ಯಾದ ಹಣ	ಖರ್ಚಾದ ಹಣ	ಉಳಿಕೆ ಹಣ
1991-92	1,355/-	1,355/-	1,355/-	-
1992-93	430/-	497-10	497-10	-
1993-94	975/-	975/-	975/-	-

ಆ) ರೂ. 1,889.00 ಲಕ್ಷಗಳು.

ವಿಷಯ : ಗದಗ್ ತಾಲ್ಲೂಕು ಸಂಬಾಪುರ ಗ್ರಾಮದಲ್ಲಿ ಯುವಕ ಮಂಡಲ ಕಟ್ಟಡ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 156(481ಎ)

ಶ್ರೀ ಕೆ.ಹೆಚ್.ಕುರಡಗಿ (ಮುಂಡರಗಿ) :- ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಸಂಭಾಪುರ ಗ್ರಾಮದಲ್ಲಿ ಯುವಕ ಮಂಡಳದ ಕಟ್ಟಡವು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಓಂಪ್ರಕಾಶ ಕಣಗಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖಾರಾಜ್ಯ ಸಚಿವರು) :-

ಅ) ಹೌದು

ಆ) ಸದರಿ ಯುವಕ ಮಂಡಲ ಈಗಾಗಲೇ ಎರಡು ಕೊಠಡಿಗಳನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಬಿಡುಗಡೆ ಮಾಡಿರುವ ರೂ.5,000-00 ರಿಂದ ನಿರ್ಮಾಣ ಮಾಡಿಕೊಂಡಿದೆ. ಉಳಿದಿರುವ ಕಟ್ಟಡಕ್ಕೆ ಸಾರ್ವಜನಿಕ ವಂತಿಕೆ ಪಡೆದು ಪೂರ್ಣಗೊಳಿಸಬೇಕಾಗುತ್ತದೆ.

ವಿಷಯ : ಸೇಡಂ ಕ್ಷೇತ್ರದಲ್ಲಿ ನೀರಿನ ಅಭಾವ

ಚುಕ್ಕೆ ಗುರುತಿನ ಸಂಖ್ಯೆ : 157 (684)

ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ಈ ವರ್ಷ ಮಳೆಗಾಲ ಪ್ರಾರಂಭದಿಂದಲೇ ಮಳೆಬಾರದೆ ಬಾವಿಗಳು ಕೆರೆಗಳು ಕೊಳವೆ ಬಾವಿಗಳಲ್ಲಿ ನೀರು ಒಣಗಿ ಹೋಗಿ ನೀರಿನ ಮಟ್ಟ ಸಿಗದೇ ನಾಗರಿಕರಿಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) :-

1) ಹೌದು.

2) ಕುಡಿಯುವ ನೀರಿನ ತೊಂದರೆ ಇರುವ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದ್ದು ಅವುಗಳು ಈ ರೀತಿ ಇರುತ್ತದೆ.

ಅ) ತೆರೆದ ಬಾವಿಗಳಲ್ಲಿ ಆಳ ಹೆಚ್ಚಿಸುವುದು.

ಆ) ವಾಹನಗಳ ಮೂಲಕ ನೀರು ಸರಬರಾಜು ಮಾಡುವುದು.

ಇ) ಹೊಸ ಕೊಳವೆ ಬಾವಿ ಕಿರು ನೀರು ಸರಬರಾಜು ಯೋಜನೆ ಹಾಗೂ ನಲ್ಲಿ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

ಇದಲ್ಲದೆ ಕೆರೆಗಳ ಹೂಳು ತೆಗೆಯುವ ಕಾರ್ಯಕ್ರಮವನ್ನು ಯೋಜಿಸಲಾಗಿದೆ.

ವಿಷಯ : ಪಶು ಚಿಕಿತ್ಸಾಲಯಗಳ ತೆರೆಯುವಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 158 (750)

ಶ್ರೀ ಕೆ.ಸಿ.ಮೊಡಗೇಕರ್ ದೇಸಾಯಿ. (ಹಿರೇಬಾಗೇವಾಡಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ತಾಲ್ಲೂಕಿನ ಮುಚ್ಚಂಡಿ ಗ್ರಾಮದ ರೈತರು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಇಲ್ಲದೇ ತೊಂದರೆ ಅನುಭವಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮದಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ತೆರೆಯಲು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಎಂ.ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಹೌದು.

ಆ) 1995-96ನೇ ಸಾಲಿನಲ್ಲಿ ಆಧ್ಯತೆಯ ಮೇಲೆ ಪರಿಗಣಿಸಲಾಗುವುದು.